Reg No. M. 1550.
KODAGU" MERCARA, (Coorg).

-42-

# ಕೊಡಗು

ಸಂಪಾದಕರು:-ಶ್ರೀ ಪಿ. ಐ. ಬೆಳ್ಯಪ್ಪ, ವಾರ್ಷಿಕ ಚಂದಾ: ರೂ: ೪-೮-೦.

ಸಂಪುಟ ೨೩ | ತಾರೀಕು ೨೫—೫—೧೯೪೫ನೇ ಶುಕ್ರವಾರ. | ಸಂಚಿಕೆ ೫೦

## ಮೂರನೇ ಮಹಾಯುದ್ಧ ನಿಶ್ಚಯ- ಡಿ ವೆ ಲ ರಾ.

ಯೂರೋಪಿನ ಯುದ್ಧ ಮುಗಿದರೂ ಭಯಂಕರ ಜ್ವಾಲಾಮುಖಿಯ ಮೇಲೆ ಯೂರೋಪು ಕೂತಂತೆ ಕಾಡುಬರುತ್ತದೆ. ಯೂರೋಪಿನ ನೂರಾರು ಸಮಸ್ಯೆಗಳು ನಗ್ನರೂಪದಿಂದ ಹೊಂಗ ಬಂದು ನಿಂತಿವೆ. ವಿಶ್ವಸಂ ಜನ್ಮಗಳ ಗೊಂದಲ ಲ್ಲಿ ತಮ್ಮ ಕಾರ್ಯಸಾಧಿಸಿಕೊಂಡು ಹರ್ಷಪಡುತ್ತಿದ್ದಾರೆ. ಈ ಸಮಸ್ಯೆಗಳನ್ನು ಸೂಕ್ಷ್ಮವಾಗಿ ಹಾಗಬಾರದೆ ಬಲ್ಲಯಮಿನ ರಾಯಲಿಸ್ಟ್ ಪಕ್ಷದವರ ಪ್ರಶ್ನೆಗಳು ಆಲ್ಲಿಯ ರಾಜಕಾರಣಿಗಳ ಭವಿಷ್ಯವನ್ನು ಪ್ರಾಮುಖ್ಯವಾಗಿ ಮಾಡಿದೆ. ರಾಜನನ್ನು ತೆಗೆದು ಪ್ರಾಕ ರಿಪಬ್ಲಿಕನ್ನು ರಚಿಸುವ ಸ್ಪೇನಿಯರಿಗೆ ಎರಡು ಪಕ್ಷಗಳು ಘರ್ಷಣೆಯಲ್ಲಿವೆ. ಪಿತಶಿಬಿರದಲ್ಲಿ ಬಿಟಿಷರು ರಾಜರು ತಾಜೇನ್ನವದಾದರೆ ರಷ್ಯನರು ರಾಜರಿಲ್ಲದೆ ಬಾರದೆಂಬ ಸ್ಥಿತಿ.

ಫ್ರಾನ್ಸು, ಜರ್ಮನಿಯಂತಹ ಆಫ್ರಿಯೂಪ ದೇಶವು ಭಾಗ ಪಡೆದು ಅಧಿಕಾರ ಸಿಕೊಳ್ಳಬೇಕೆಂದಿರುವದು. ಇಟೆಲಿಯಾ ಕೆಲವು ಭಾಗಗಳನ್ನು ಗಟ್ಟಿಗಿ ಫ್ರೆನ್ಸ್ ಸೇನೆಗಳು ಶಕ್ತಿ ಗಳಿಸಿಕೊಳ್ಳುತ್ತಿವೆ. ಸಿರಿಯಾ, ಲೆಬನಾನಿನಲ್ಲಿ ಫ್ರೆನ್ಸ್ ಅನುಸೂಚಕ ಪ್ರಯತ್ನ ನೀಡಿದ್ದು ಭಯಂಕರ ತೊಂದರೆಗಳಿಗೆ ಕಾರಣವಾಗಿ ಪರಿಣಮಿಸತೊಡಗಿವೆ.

ಯಂಗುಸ್ಲೇವಿಯಾದ ಏಕಮುಖವಾಗಿ ಮಾರ್ಷಲ್ ಟಿಟೋರವರ ನೇತೃತ್ವದಲ್ಲಿ ಪ್ರೇಸ್ಟೆ ಮತ್ತು ಆಸ್ಟ್ರಿಯಾದ ಕೆಲವು ಭಾಗಗಳು ತಮ್ಮ ಕಡೆಯಿರಬೇಕೆಂದು ಘೋಷಿಸುತ್ತಿದ್ದಾರೆ. ಇದಕ್ಕೆ ಇಡೀ ವಿಶ್ವಪಕ್ಷವೇ ವಿರೋಧಪಿದ್ದು ಮಾರ್ಷಲ್ ಟಿಟೋರವರ ಸೇನೆಗಳು ಇಂ ವಿಶ್ವರೂ ಮತ್ತೊಂದು ಯುದ್ಧವಾಗುವದೇ ಎಂದು ಸಂದೇಹಪಡುವ ಪರಿಸ್ಥಿತಿಬಂದಿದೆ.

ಪೋಲೆಂಡಿನ ಸಮಸ್ಯೆಯು ವಿಶ್ವರ ಭಾಂಡವ್ಯದ ಅಗ್ನಿಪರೀಕ್ಷೆಯಾಗಿದೆ. ರಷ್ಯನರು ಲಬ್ಲಿನ್ ಸರಕಾರವನ್ನು ಒಪ್ಪಿ ಓಡರ್ ನದೀತೀರದ ವರೆಗಿನ ಪ್ರದೇಶವನ್ನು ಪೋಲರಿಗೆ ಬಿಟ್ಟುಕೊಟ್ಟಿದ್ದಾರೆ. ಬ್ರಿಟಿಷರು ಇದಕ್ಕಾಗಿ ಹೃದಯದಲ್ಲೇ ಕುದಿಯುತ್ತಿದ್ದಾರೆ. ಬರ್ಲೀನಿನಲ್ಲಿ ಬ್ರಿಟಿಷರ ಮತ್ತು ಅಮೇರಿಕನರ ಸೈನಿಕ ತಂಡಗಳು ಕಾಲಿಡುವಂತೆ ರಷ್ಯನರು ನಿರ್ಬಂಧಿಸಿದ್ದಾರೆ. ಗ್ರೀಸಿನಲ್ಲಿ ದಂಗೆಗಾರರ ತಂಡವು ಬಲಗೊಂಡಿದೆ. ಇದಕ್ಕೆ ಬ್ರಿಟಿಷರ ಬೆಂಬಲವಿದೆ. ಆಸ್ಟ್ರಿಯಾದಲ್ಲಿ ರಷ್ಯಾನರು ಆಸ್ಟ್ರಿಯಾದಲ್ಲಿ ತಾತ್ಕಾಲಿಕ ಸರಕಾರವನ್ನು ಏರ್ಪಡಿಸಿದ್ದಾರೆ. ಅಮೇರಿಕಾ, ಬ್ರಿಟನ್ ಫ್ರಾನ್ಸ್‌ಗಳು ಆಸ್ಟ್ರಿಯಾದಲ್ಲಿ ತಮ್ಮ ಭಾಗದ ಪಾಲಿಗಾಗಿ ಎದುರುನೋಡುತ್ತಿದ್ದಾರೆ. ರಷ್ಯಾದ ತಾತ್ಕಾಲಿಕ ಸರಕಾರವನ್ನು ಉಳಿದ ಮಿತ್ರರು ಅಂಗೀಕರಿಸಿಲ್ಲ. ಈ ರೀತಿ ಯೂರೋಪು ಜರ್ಝರಿತವಾಗಿ ಅಲ್ಲೋಲಕಲ್ಲೋಲವಾಗಿದೆ.

### ಮಿತ್ರ ಶಿಬಿರ.

ಮಿತ್ರಶಿಬಿರದಲ್ಲಿ ಈ ಅಲೆಯಲ್ಲೋಲಕಲ್ಲೋಲವಾದ ನಿಲುವಿಗೆ ಹಲವಾರು ಕಾರಣಗಳು ಹುಟ್ಟಿಕೊಂಡಿವೆ. ಜರ್ಮನಿಯ ಒಡೆದ ಬ್ರಿಟನ್ ಅಮೇರಿಕಾಗಳು ತೋರಿಸುತ್ತಿರುವ ಸಹಾನುಭೂತಿಯು ರಷ್ಯನರಿಗೆ ಸಂಶಯಕ್ಕೆ ಎಡೆಕೊಟ್ಟಿವೆಯೆಂದು ವಿಶ್ಲೇಷಕರು ಯೋಚಿಸಿದ್ದಾರೆ. ಈ ದೃಷ್ಟಿಯಿಂದ ರಷ್ಯನರು ಯೂಗ್ಲೇವಿಯಾ ಟಿಟೋರವರ ಸಂಗಡ ಪ್ರಬಲವಾಗಿ ಪೂರ್ವಭಾಗದಲ್ಲಿ ಕಾದುತ್ತಿದ್ದಾರೆ. ಆದರೆ ಪಶ್ಚಿಮ ಭಾಗದಲ್ಲಿ ಜರ್ಮನಿಯು ಬ್ರಿಟನ್, ಅಮೇರಿಕಾಗಳಿಗೆ ಶರಣಾಗಿದ್ದಂತೆ, ಬ್ರಿಟನ್ ಅಮೇರಿಕಾಗಳು ಯುದ್ಧ ಪ್ರಮಿನೇತರಾಗಿದ್ದಂತೆ ಜರ್ಮನರನ್ನು ಭಾವಿಸಿದ್ದನ್ನು ಬಿಟ್ಟು ಜರ್ಮನ್ ಸೇನಾನಿಗಳನ್ನು ಫ್ರಾನ್ಸ್ ಯೂಗ್ಲೇವಿಯಾ ಪೂರ್ವಕ್ಕಾಗಿ ಕಾದಿರಿಸಿದ್ದು, ಗೋರಿಂಗ್ ಬಗ್ಗಲಾದವರ ಬಗ್ಗೆ ಮಿತ್ರತೆಗೆದರಿದ್ದೂ ವಾರ್ತೆಗಳಿವೆ. ಇವುಗಳಿಂದ ರಷ್ಯಾದ ಮನಸಿನಲ್ಲಿ ಸಂಶಯ ಹುಟ್ಟಿದೆ. ಯುದ್ಧದ ಸಮಯದಲ್ಲಿ ಜರ್ಮನಿಯ ಮೇಲೆ ಕಾರುತ್ತಿದ್ದ ದ್ವೇಷ ಸೂಯಿಗಳು ಈಗ ಫಕ್ಕನೆ ಮಾರ್ಪಟ್ಟಿರುವದು ರಷ್ಯನರಿಗೆ ಆಶ್ಚರ್ಯವನ್ನುಂಟುಮಾಡಿದೆ. ರಷ್ಯಾವು ಕೂಡ ಬ್ರಿಟನ್ ಅಮೇರಿಕಗಳ ಮೇಲೆ ಹೆಚ್ಚಿನ ವಿಶ್ವಾಸವಿಟ್ಟಂತೆ ಕಂಡು ಬಾರದು. ಒರ್ಡಿನ್ ನಗರವನ್ನು ರಷ್ಯನರು ಪ್ರಥಮ ವಶಪಡಿಸಿಕೊಂಡ ನಂತರ ಕೆಲವು ಸಮಯದ ವರೆಗೆ ಅದರೊಳಗೆ ಅಮೇರಿಕನ್ ಮತ್ತು ಬ್ರಿಟಿಷರನ್ನು ಪ್ರವೇಶಿಸಲು ಅವರು ಬಿಡಲಿಲ್ಲವೆಂದು ಕಥೆಯಿದೆ, ಯೂರೋಪಿನ ಯುದ್ಧವನ್ನು ಗೆದ್ದ ಪ್ರಧಾನ ಪ್ರಶಸ್ತಿಯು ರಷ್ಯನರಿಗೆ ಸಲ್ಲಬೇಕು ನಿಜ. ಅದಕ್ಕಾಗಿ ಅವರು ಯೋಗ್ಯ ಪರಿಹಾರವನ್ನು ಪಡೆಯಲೆತ್ನಿಸಲೂ ಬಹುದು. ಸ್ಯಾನ್ ಫ್ರಾನ್ಸಿಸ್ಕೋ ಪರಿಷತ್ತಿನ ಕಾರ್ಯವಿವರಗಳ ವಲೋಕನವನ್ನು ಮಾಡಿದರೆ ರಷ್ಯಾವು ತನ್ನ ವರ್ಚಸ್ಸನ್ನು ದಿನೇ ದಿನೇ ಹೆಚ್ಚಿಸಿಕೊಳ್ಳುತ್ತಿದೆಯೆಂದು ನಿರ್ವಿವಾದವಾಗಿ ಹೇಳಬಹುದು. ಹೀಗೆ ದಿನೇ ದಿನೇ ಜನಾನುರಾಗಿಯಾಗಿ ಪ್ರಬಲಸೌಳ್ಳುತ್ತಿರುವ ರಷ್ಯದ ಬಗೆಗೆ ಬಿಟನ್ ಅಮೇರಿಕಗಳ ಮನಸ್ಸು ಕಳವಳಗೊಂಡಿದೆ.

### ಪ್ರ ಚಾ ರ.

ಇದಕ್ಕಾಗಿ ಬ್ರಿಟನ್ಸ್, ಅಮೇರಿಕಾಗಳು ಬಹು ವಿಶಾಲ ಪ್ರಚಾರಕ್ಕೆ ತೊಡಗಿವೆ. ಬ್ರಿಟನಿನ ಪತ್ರಿಕೆಗಳು ರಷ್ಯಾವನ್ನು ಕಠೋತರವಾಗಿ ಟೀಕಿಸತೊಡಗಿವೆ. ಇಂದು ರಷ್ಯಾವು ಕೈಕೊಂಡಿರುವ ಏರ್ಪಾಡುಗಳು, ಜನ ಸರಿಪಡಿಸಿರುವ ನೀತಿಗಳು ಪೂರ್ವ ಐರೋಪ್ಯ ಬಾಲ್ಕನ್ ಪ್ರದೇಶಗಳಿಂದ ಎಲ್ಲಾ ಯೂರೋಪಿನ ಪಶ್ಚಿಮದ ವರೆಗೆ ಒಂದು ದೊಡ್ಡ ಸಾಮ್ರಾಜ್ಯ ಗಡಿಯನ್ನು ನಿರ್ಮಿಸಲಿಕ್ಕೆ. ಈ ದೃಷ್ಟಿಯಿಂದ ರಷ್ಯನು ಯೂಗ್ಲೇವಿಯಾ ಟಿಟೋರವಿಗೆ ಗಣ್ಯತೆ ಕೊಡುತ್ತಿದ್ದಾರೆ. ಆಸ್ಟ್ರಿಯಾದಲ್ಲಿ ಕಮ್ಯೂನಿಸ್ಟ್ ಪಕ್ಷವನ್ನು ವಿಸ್ತರಿಸಲು ಅವರು ಪ್ರಯತ್ನಿಸುತ್ತಿವೆ. ಈ ರೀತಿಯ ಸಿದ್ಧತೆಯನ್ನು ಯಾರ ವಿರುದ್ಧವಾಗಿ ರಷ್ಯಾವು ಸಜ್ಜಾಗುತ್ತಿದೆ ಎಂಬುದನ್ನೂ ಅವರು ಸೂಚಿಸಿದ್ದಾರೆ. ಬ್ರಿಟನಿನ ಕೆಲವು ಪತ್ರಿಕೆಗಳು ರಷ್ಯಾದ ಮೇಲೆ ಕೆಂಡ ಕಾರುತ್ತಿವೆ. ಕತ್ತಿ ನಿಜವಾಗಿಯೂ ಬ್ರಿಟನು ರಷ್ಯಾದ ವಿರುದ್ಧ ಸಿದ್ಧಗೊಳ್ಳುತ್ತಿದೆಯೇ ಎನ್ನುವಂತೆ ಬ್ರಿಟನಿನಲ್ಲಿದ್ದ ಪೋಲೆಂಡ್ ಸರಕಾರವು ತನ್ನ ಜನರನ್ನೆಲ್ಲಾ ಸಂಗ್ರಹಿಸಿ ತರಬೇತು ಮಾಡುತ್ತಿದೆ. ಇಂಗ್ಲೆಂಡಿನಲ್ಲಿ ಒಟ್ಟು 3,000,000 ಪೋಲರಿಂದ ಕೂಡಿದ ಸೈನ್ಯ ತಯಾರಾಗಿದೆ. ಇವರ ರಕ್ಷಣೆಯನ್ನು ಬ್ರಿಟನೇ ಮಾಡುತ್ತಿದೆ. ಈ ರೀತಿ ಬ್ರಿಟನ್ನಿನ ಪತ್ರಿಕೆಗಳು ಅತ್ಯಗ್ರ ಟೀಕೆಗೆ ಪ್ರಾರಂಭಿಸಿರುವರು. ರಷ್ಯಾವು ಕೂಡ ಈ ವಿಚಾರಗಳನ್ನು ಗಮನಿಸಿ ವರ್ತಿಸುತ್ತಿದೆ.

### ಜಪಾನು ಯುದ್ಧ.

ಪರಿಸ್ಥಿತಿ ಹೀಗಿರುವದರಿಂದ ಜಪಾನರ ಮೇಲೆ ಮುಂದೆ ಮಾಡಬೇಕಾದ ಯುದ್ಧಕ್ಕೆ ರಷ್ಯಾದ ಸಹಾಯ ಕೇಳಲು ಬ್ರಿಟನ್ ಅಮೇರಿಕಾಗಳು ಸ್ವಲ್ಪ ಮಟ್ಟಿಗೆ ಹಿಂಜರಿಯುತ್ತಿವೆಯೆಂದು ಹೇಳಬಹುದು. ರಷ್ಯಾವು ಈ ಯುದ್ಧದಲ್ಲಿ ಭಾಗ ವಹಿಸಬೇಕಾದರೆ ಮಂಚೂರಿಯಾ, ಫಾರ್ಮೋಸಾ ಮೊದಲಾದವುಗಳು ತಮಗೆ ದೊರೆಯಬೇಕೆಂದು ಹೇಳಯೇ ಬಿಟ್ಟಿದೆ. ಇವೆಲ್ಲ ರಷ್ಯನರ ವಶವಾದರೆ ರಷ್ಯದ ಅಖಂಡತೆಯು ಬೆಳೆದು ಬ್ರಿಟಿಷ್, ಅಮೇರಿಕಾಗಳ ಪ್ರತಿಷ್ಠೆಯ ಶಿಖರವನ್ನು ಕೆಳಗಿಳಿಸಬಹುದು. ಆದ್ದರಿಂದ ಆ ಒಗ್ಗೆ ಮಿತ್ರರಲ್ಲಿ ಸ್ವಲ್ಪ ಶಂಕೆ ಇದೆ. ಮುಂದೆ ಜಪಾನಿನ ಮೇಲೆ ಯುದ್ಧ ನಡೆಸುವಾಗ ಬ್ರಿಟಿಷ್ ಅಮೇರಿಕಾಗಳು ಚೀನಾದ ಚಿಯಾಂಗರಿಗೆ ಬೆಂಬಲ ಕೊಡಬೇಕಾಗಿದೆ. ಆದರೆ ಚೀನಾದ ಕಮ್ಯೂನಿಸ್ಟ್ ಮತ್ತು ಕ್ಯೂಮಿಂಟಾಂಗ್ (ಚಿಯಾಂಗ್) ಪಕ್ಷದವರು ಒಂದಾಗಿಲ್ಲ ಕ್ಯೂಮಿಂಗ್ ಟಾಂಗ್ ಪಕ್ಷವು ಕಮ್ಯೂನಿಸ್ಟ್ ಪಕ್ಷವನ್ನು ಬ್ರಿಟನ್, ಅಮೇರಿಕಾಗಳ ಸಹಾಯದಿಂದ ಮಟ್ಟಹಾಕಿಸಿದರೆ ಕಮ್ಯೂನಿಸ್ಟ್ ಪಕ್ಷಕ್ಕೆ ರಷ್ಯನರ ಸಹಾಯವಿರುವ ಕಾರಣ ಚೀನಾವು ಮಿತ್ರರ ಯುದ್ಧರಂಗವಾಗಬಹುದು.

### ಮುಂದಿನ ರಂಗ.

ಬ್ರಿಟಿಷರು ಹಿಂದೂಸ್ಥಾನದ ಬಗ್ಗೆ ತೋರಿಸುತ್ತಿರುವ ಅನಾಸಕ್ತಿ, ಬರ್ಮಾದ ವಿಚಾರದ ನೀತಿ, ಜಗತ್ತಿನ ಮಹಾಖಂಡರೆನ್ನುವ ರಾಷ್ಟ್ರಗಳು ಅಂತರ್ರಾಷ್ಟ್ರೀಯ ಸಾರ್ವಭೌಮತ್ವ ಇವುಗಳನ್ನು ನೋಡಿದರೆ ಈ ಯುದ್ಧದಿಂದ ಜಗತ್ತು ಪಾಠ ಕಲಿಯಲಿಲ್ಲವೆಂದು ಸ್ಪಷ್ಟವಾಗಿ ತೋರಿಬರುತ್ತದೆ. ಜಪಾನಿನ ಚೀನಾದಿಂದ ಒಪ್ಪಂದ ಮಾಡಿಕೊಳ್ಳುವ ಪ್ರಯತ್ನವೂ ನಡೆದಿದೆ. ಅತ್ತ ಇಂಡೋಚೈನಾದಲ್ಲಿ ಬ್ರಿಟಿಷ್, ಅಮೇರಿಕಗಳಲ್ಲಿ ಅತೃಪ್ತಿ ಹೊಗೆಯಾಡುತ್ತಿದೆ. ಭಾರತ ಖಂಡವು ಬ್ರಿಟಿಷರ ಶತಮಾನಗಳ ಆಳಿಕೆಯ ಕಟುಫಲವನ್ನು ಉಣ್ಣುತ್ತಿದೆ. ಈ ರೀತಿ ಪೂರ್ವಭಾಗದ ಈ ರಾಷ್ಟ್ರಗಳು ಪಶ್ಚಿಮ ಭಾಗದ ರಾಷ್ಟ್ರಗಳ ಕ್ಷೇತ್ರಗಳಿಂದ ಉದ್ವಿಗ್ನರಾಗಿದ್ದಾರೆ. ಅತ್ತ ಪಶ್ಚಿಮ ರಾಷ್ಟ್ರಗಳಿಗಾದರೂ, ಜನ ಸಮೂಹದ ಪುನರ್ ಯೋಜನೆ, ರಷ್ಟ್ರದ ಸ್ವಾತಂತ್ರ್ಯ ಹಕ್ಕುಗಳನ್ನು ತಡೆಯದಾಗಿದೆ. ಈ ರೀತಿ ಪೂರ್ವ ಮತ್ತು ಪಶ್ಚಿಮ ಖಂಡಗಳಲ್ಲಿ ಅತಜ್ಞೋಧ, ಘರ್ಷಣೆಯು ಸೂಕ್ಷ್ಮರೂಪದಲ್ಲಿ ಕಂಡು ಬಂದಿದೆ. ವಿಶ್ವಸಂಸ್ಥೆಯು ಸ್ಥಾಪಿತವಾದ ಪೂರ್ವಪೀಠಿಕೆಯಿಂದರೆ ವಿಶ್ವಾಸಾಸ್ಪದವಾಗಿರಲಿಲ್ಲ. ಪ್ರಧಾನ ರಾಷ್ಟ್ರಗಳ ತಲೆಯಲ್ಲಿ ಒಂದಿಷ್ಟು ಪ್ರಪಂಚಶೀಕರಿಸುವ ಸಂತಾಪಸ್ಕಂಗತಿ. ಜಗತ್ತಿನ ಜನಜಂಗುಳಿ ಯುದ್ಧದಿಂದ ಬೆಂಡು ಬಸವಳಿದಿದೆ. ಆದರೆ ಪಾಪಿಷ್ಠ ರಾಜಕಾರಿಣಿಗಳು ಒಡ ಜನರ ಸುಖ ಶಾಂತಿಯನ್ನು ರಣದೇವಿಯ ಜಗಣ್ಣೇ ದಿಕೆಯಲ್ಲಿ ಬಲಿಕೊಡುತ್ತಿದ್ದಾರೆ. ಈ ಮುಧಾಂಧ ರಾಷ್ಟ್ರಗಳಿಗೆ ಕಿವಿವೆ ಎಂದು ಬರುವದೋ, ಜಗತ್ತಿನಲ್ಲಿ ಶಾಶ್ವತ ಶಾಂತಿಗೆ ಕಾರಣವಾದ ಹಕ್ಕುಗಳ ಮೇಲ್ಮೆ ಎಂದಾಗುವದೋ ತಿಳಿದವರಾರು? ಆದರೂ ಅಂಧಾಸುದಿನ, ಆ ಸ್ವಪ್ರಕಾಶ ಅಹಿಂಸಾವಾದಿ ಭರತಖಂಡದಿಂದಲೇ ಬೆಳಗೀತು ಎಂಬ ವಿವೇಕನಂದರ ವಾಣಿಯೊಗಲಿ, ಕವಿರವೀಂದ್ರರ ಸಂದೇಶವಾಗಲಿ ಸುಳ್ಳಾಗಲಿಕ್ಕಿಲ್ಲವೆಂದು ದೃಢವಾಗಿ ಹೇಳಬಹುದು.

# ಕೊ ಡ ಗು

ತಾ. 25-5-1945ನೇ ಶುಕ್ರವಾರ

## ಚು ನಾ ವ ಣೆ .

ಕೊಡಗು ಜಿಲ್ಲಾ ಬೋರ್ಡಿನ ಚುನಾವಣೆಯು ತಾ. 21-5-45 ರಲ್ಲಿ ನಡೆದು ತಾ. 24-5-45 ರಲ್ಲಿ ಫಲಿತಾಂಶವು ಪ್ರಕಟಿಸಲ್ಪಟ್ಟಿತು. ಸ್ಪರ್ಧೆ ನಡೆದ ಪೊನ್ನಂಪೇಟೆ, ಫ್ರೇಜರ್‌ಪೇಟೆ ಮತ್ತು ಶನಿವಾರಸಂತೆ ಈ ಮೂರು ಸ್ಥಳಗಳಲ್ಲಿ ತೀವ್ರ ಪೈಪೋಟಿಯಿದ್ದರೂ ಕಾಂಗ್ರೆಸೇ ಜಯವನ್ನು ಪಡೆಯಿತೆನ್ನಬಹುದು. ಶನಿವಾರಸಂತೆಯ ಚುನಾವಣೆಯಲ್ಲಿ ಮತದಾರ ಪತ್ರದಲ್ಲಿ ಉಮೇದುವಾರರಿಗೆ ಕೊಟ್ಟ ಸಂಕೇತಗಳ ವ್ಯತ್ಯಾಸವಾಗಿ ಚುನಾವಣೆಯು ನ್ಯಾಯಸಮರ್ಪಕವಾಗಿ ನಡೆಯಿಲ್ಲವೆನ್ನಬಹುದು. ಉಮೇದುವಾರರು ಪುನಹ ಚುನಾವಣೆ ಮಾಡಬೇಕೆಂಬ ತಮ್ಮ ಅರ್ಜಿಯನ್ನು ಹಾಕಿಕೊಂಡಿರುವರು. ನಿಜವಾಗಿಯೂ ಉಮೇದುವಾರರಿಗೆ ಕೊಟ್ಟ ಸಂಕೇತಗಳ ಮೇಲೆಯೇ ಮತದಾರರ ಆನರಲ್ಲೂ ವಿದ್ಯಾವಂತರಲ್ಲವು ಮತದಾರರ ನಿರ್ಣಯವಾಗುವದಾಗಿದೆ. ಅಂಥಾ ಸಂಕೇತಗಳು ವ್ಯತ್ಯಾಸಗೊಂಡು ನಡೆದ ಚುನಾವಣೆ ಸಮರ್ಪಕವಾಗಲಾರದು. ಆದ್ದರಿಂದ ಪುನಹ ಚುನಾವಣೆ ಇಲ್ಲಿ ಆಗಲೇ ಬೇಕು.

ಪೊನ್ನಂಪೇಟೆ ಕೇಂದ್ರಕ್ಕಿಂಥಾ ಒಹು ದೊಡ್ಡ ಸ್ಪರ್ಧೆ ಇದ್ದದ್ದು ಫ್ರೇಜರ್‌ಪೇಟೆಯಲ್ಲಿ. ಕಾಂಗ್ರೆಸಿಗೆ ವಿರುದ್ಧ ನಿಂತವರು ಹಣೀಯರು ಸಾವಿರಾರು ರೂಪಾಯಿಗಳನ್ನು ವೆಚ್ಚಮಾಡಿದರು. ಟೀ, ಕಾಫೀ ಮೊದಲಾಗುವುಗಳ ಮೋಹವನ್ನು ಬೀರಿದರು. ಆದರೂ ಈ ಹೋಬಳಿಯ ಜನರು ಕಾಂಗ್ರೆಸ್ಸೇ ಬಡವರ ಕಾಮಧೇನುವೆಂಬುದನ್ನರಿತು ಕಾಂಗ್ರೆಸ್ ಉಮೇದುವಾರರಿಗೆ ಜಯ ಒದಗಿಸಿಕೊಟ್ಟದ್ದು ಶ್ಲಾಘನೀಯವಾಗಿದೆ. ಹೇಗೂ ಕೊಡಗು ನಾಡಿನವರು ಜಿಲ್ಲಾ ಬೋರ್ಡಿನ ಹನ್ನೊಂದರಲ್ಲಿ ಹತ್ತು ಸ್ಥಳಗಳನ್ನು ಕಾಂಗ್ರೆಸಿಗೆ ಒದಗಿಸಿಕೊಟ್ಟಿರುವರು. ಶನಿವಾರಸಂತೆಯಲ್ಲಿ ಪುನಹ ಚುನಾವಣೆಯಾದಾಗ ಅಲ್ಲಿಯ ಜನತೆಯೂ ಹಿಂದುಳಿಯಲಿಕ್ಕಿಲ್ಲ; ತಮ್ಮದೇ ಸಂಸ್ಥೆಯಾದ ಕಾಂಗ್ರೆಸನ್ನು ಮರೆಯಲಿಕ್ಕಿಲ್ಲವೆಂದು ನಂಬುವೆವು. ಇಡೀ ಕೊಡಗು ನಾಡು ತನ್ನ ಉದ್ದಾರದ ಮಾರ್ಗ ಕಾಂಗ್ರೆಸ್ಸೆಂದು ಕೈಯೆತ್ತಿ ತೋರಿಸುತ್ತಿರುವಾಗ ಶನಿವಾರಸಂತೆ ಹೋಬಳಿಯು ಆಡ್ಡದಾರಿ ಹಿಡಿಯಲಾರದು.

ಇನ್ನೀಗ ಅಂದರೆ ತಾ. 28-5-45 ರಲ್ಲಿ ಕೌನ್ಸಿಲು ಚುನಾವಣೆ ನಡೆಯವದು. ಸ್ಪರ್ಧೆಯಿರುವ ವೀರಾಜಪೇಟೆ, ಪೊನ್ನಂಪೇಟೆ ನಾಡುಗಳಲ್ಲಿ ಬಿರುಸಿನಿಂದ ಕಾರ್ಯ ನಡೆಯುತ್ತಿದೆ. ಇವೆರಡು ಸ್ಥಳಗಳೂ ಕೊಡಗು ಕಾಂಗ್ರೆಸಿನ ಕೇಂದ್ರ ಸ್ಥಳಗಳು. ಇಲ್ಲಿ ಕಾಂಗ್ರೆಸಿಗೆ ಅಪಜಯವೆಂಬ ಸೊಲ್ಲು ಬರಬಾರದು. ಲೋಕೈಕ ಮಹಾಸಂಸ್ಥೆಯಾದ ಕಾಂಗ್ರೆಸನ್ನು ಎದುರಿಸಿ ಚುನಾವಣೆಗೆ ನಿಂತ ವ್ಯಕ್ತಿಗಳಿಗೆ ಕಾಂಗ್ರೆಸಿನ ಪ್ರತಿಭೆಯನ್ನು ತಿಳಿಸಬೇಕು. ಕಾಂಗ್ರೆಸು ಸಮ್ಮದು ಹೇಗೋ ಹಾಗೆಯೇ ಕಾಂಗ್ರೆಸಿಗೆ ವಿರೋಧನಿಂತವರು ಸಂಸ್ಥೆಯೂ ಹೌದೆಂಬ ಆದರವನ್ನು ಅವರಿಗೆ ಮೂಡಿಕೊಡಬೇಕು. ನ್ಯಾಯಸಮರ್ಪಕವಾದ ತತ್ವಗಳ ಆಧಾರವಿಲ್ಲದೆ ಕಂಡ ಜನರಿಗೆ ತೋರಿದ ರೀತಿ ಸಮುಜಾಯಿಸಿಕೊಟ್ಟು ಓಟನ್ನು ಆಪಹರಿಸಲೆತ್ನಿಸುವವರಿಗೆ ಮತದಾರರು ಯೋಗ್ಯ ಉತ್ತರ ಕೊಡಬೇಕು. ಮೋಹದ ಮಾತುಗಳಿಗೆ, ಕಾಫಿ ಟೀಗಳಿಗೆ ಬಲಿಕೊಡವಂಥಾ ವಸ್ತು ಓಟಲ್ಲ. ಜಿಲ್ಲಾ ಬೋರ್ಡಿನ ಚುನಾವಣೆಯಲ್ಲಿ ಮತದಾರರು ಸರಿಯಾದ ಪಾಠವನ್ನು ಕಾಂಗ್ರೆಸಿಗೆ ವಿರೋಧನಿಂತವರಿಗೆ ಕಲಿಸಿದ್ದಾರೆ. ಕೌನ್ಸಿಲಿನ ಮತದಾರರು ಅದರಲ್ಲೂ ವೀರಾಜಪೇಟೆ, ಪೊನ್ನಂಪೇಟೆಯ ಮತದಾರರು ಅದೇ ಪಾಠವನ್ನು ಕಾಂಗ್ರೆಸ್ ವಿರೋಧಿಗಳಿಗೆ ಹೇಳಿಬೇಕು. ಕಾಂಗ್ರೆಸಿಗೆ ವಿರುದ್ಧ ನಿಲ್ಲುವದೆಂದರೆ ಮಿಂಚುಹುಳವು ದಿನಕರನನ್ನು ಎದುರಿಸಿದಂತೆ ಎಂಬುದನ್ನು ಖಚಿತಪಡಿಸಬೇಕು.

## ಮ ತ ರ್ಮ ನ .

ಹಾತೂರು ಶಾಲೆಯಲ್ಲಿ 6ನೇ ತರಗತಿಯನ್ನು ತೆರೆಯುವ ಸಮಾರಂಭವು ತಾ. 18-5-45ರಲ್ಲಿ ಕೊಡಗು ಜಿಲ್ಲಾ ಬೋರ್ಡಿನ ಮಾಜಿ ಪ್ರೆಸಿಡೆಂಟರಾಗಿದ್ದ ಶ್ರೀ ಸಿ. ಎಂ. ಪೂಣಚ್ಚನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸಿವಿಲ್ ಸರ್ಜನರಿಗೆ ಮಾಸಿಕ ರೂ. 380ರಿಂದ 600ರ ವರೆಗಿನ ಸಂಬಳದ ಗ್ರೇಡನ್ನು ನಿಶ್ಚಯಿಸಲಾಗಿದೆ. ಅಲ್ಲದೆ ಹೆಲ್ತ್ ಆಫೀಸರ್ ಬತ್ಯವೆಂದು ತಿಂಗಳಿಗೆ ರೂ. 100 ಕೊಡಲು ಇಂಡಿಯಾ ಸರಕಾರದವರು ಆಪ್ಪಣೆ ಮಾಡಿರುವರು.

# ಜಿಲ್ಲಾ ಬೋರ್ಡು ಚುನಾವಣೆ ಫಲಿತಾಂಶ

## ಕಾಂಗ್ರೆಸಿಗೆ ಪ್ರಚಂಡ ಜಯ.

| | | |
|---|---|---|
| ಶ್ರೀಮಂಗಲನಾಡು— | ಶ್ರೀ. ಆಜ್ಜಿಕುಟ್ಟಿರ ಮಾದಪ್ಪನವರು (ಕಾಂ.) | |
| ಪೊನ್ನಂಪೇಟೆನಾಡು— | ಶ್ರೀ. ಕಾಳೇಂಗಡ ಚಿಣ್ಣಪ್ಪನವರು (ಕಾಂ.) | 354 |
| | ಶ್ರೀ. ಪುಚ್ಚಿಮಾಡ ಮಾದಯ್ಯನವರು (ಸ್ವ.) | 241 |
| | ವ್ಯರ್ಥವಾದ ಓಟುಗಳು | 18 |
| ವೀರಾಜಪೇಟೆ— | ಶ್ರೀ. ಮಂಡೇಪಂಡ ಸೋಮಯ್ಯನವರು (ಕಾಂ.) | |
| ಅಮ್ಮತ್ತಿನಾಡು— | ಶ್ರೀ. ಐನಂಡ ಕಾರ್ಯಪ್ಪನವರು (ಕಾಂ.) | |
| ಪಾಡಿನಾಲ್ಕುನಾಡು— | ಶ್ರೀ. ನಡಿಕೇರಿಯಂಡ ದೇವಯ್ಯನವರು (ಕಾಂ.) | |
| ಮಡಿಕೇರಿನಾಡು— | ಶ್ರೀ. ಚೌರಿರ ಮಂದಣ್ಣನವರು (ಕಾಂ.) | |
| ಭಾಗಮಂಡ್ಲನಾಡು— | ಶ್ರೀ. ನಿಡ್ಯಮಲೆ ಸೋಮಣ್ಣನವರು (ಕಾಂ.) | |
| ಸುಂಟಿಕೊಪ್ಪನಾಡು— | ಶ್ರೀ. ಕೋರನ ದೇವಯ್ಯನವರು (ಕಾಂ.) | |
| ಫ್ರೇಜರ್‌ಪೇಟೆನಾಡು— | ಶ್ರೀ. ವಿ. ಕಾಳೇಗೌಡರು (ಕಾಂ.) | 296 |
| | ಶ್ರೀ. ವಿ. ನಾಗರಾಜುಶೆಟ್ಟಿಯವರು (ಸ್ವ.) | 289 |
| ಸೋಮವಾರಪೇಟೆ— | ಶ್ರೀ. ಸಿಂಗೂರು ಮಾದಪ್ಪನವರು (ಕಾಂ.) | |
| ಶನಿವಾರಸಂತೆನಾಡು— | ಬೇಲಟ್ ಪತ್ರದಲ್ಲಿ ತಪ್ಪುಗಳಿದ್ದ ಕಾರಣ ಪುನಹ ಚುನಾವಣೆಯಾಗಲಿದೆ | |

ಅಖಿಲ ಭಾರತ ಹಿಂದು ಹರಿಜನ ಸ್ವತಂತ್ರ ಸೇನೆಯ ಅಧ್ಯಕ್ಷರಾಗಿ ಶ್ರೀ ಬಲ್ಲಚಂಡ ಕೆ. ಚಂಗಪ್ಪನವರನ್ನು ಆರಿಸಲಾಗಿದೆ. ಅವರು ಬರುವ ಜೂನ್ ತಿಂಗಳ ಪ್ರಥಮ ವಾರದಲ್ಲಿ ದಕ್ಷಿಣ ಹಿಂದೂ ಸ್ಥಾನ ಮತ್ತು ಕೇರಳ ಜಿಲ್ಲೆಗಳನ್ನು ಸಂದರ್ಶಿಸಿ ತಿರುವಂಕೂರಿನ ದಿವಾನರಾದ ಸರ್. ಸಿ. ಪಿ. ರಾಮಸ್ವಾಮಿಯವರೊಡನೆ ಹರಿಜನ ಸಮಸ್ಯೆಯ ವಿಚಾರ ಮಾತುಕತೆ ನಡೆಸಲಿರುವರು. ಅವರು ಈ ವಾರದಲ್ಲಿ ಕೊಡಗಿಗೆ ಬಂದು ಒಂದು ವಾರದವರೆಗೆ ಇರುವರೆಂದೂ ಕೊಡಗಿನ ಹರಿಜನ ಕೆಲಸಗಾರರು ವಿಧಾಯಕ ಕಾರ್ಯಕ್ರಮದ ಬಗ್ಗೆ ಅವರೊಡನೆ ಮಾತುಕತೆ ನಡೆಸಬಹುದೆಂದೂ ತಿಳಿಯಬರುತ್ತದೆ.

ಮದರಾಸು ವಿಶ್ವವಿದ್ಯಾಲಯದ ಬಿ. ಎಸ್ ಸಿ. ಪರೀಕ್ಷೆಯಲ್ಲಿ ಶ್ರೀಮತಿ ಕೋಟೆರ ಸಿ. ಪಾರ್ವತಿಯವರೂ, ಶ್ರೀ ಮಂಡೇಟೆರ ಎ. ಗಣಪತಿಯವರೂ, ಬಿ. ಎ. ಪರೀಕ್ಷೆಯಲ್ಲಿ ಶ್ರೀ ಕಂಡ್ರತಂಡ ಮುತ್ತಪ್ಪ, ಕುಲ್ಲೆಟ್ಟಿರ ಬಿ. ಐಯ್ಯಪ್ಪ, ಗುಮ್ಮಟ್ಟಿರ ಮುತ್ತಣ್ಣನವರು ಪೂರ್ತಿಯಾಗಿಯೂ, ಶ್ರೀ ಮುಕ್ಕಾಟ್ಟಿರ ಗಣಪತಿಯವರು 1ನೇ ಮತ್ತು 2ನೇ ಭಾಗಗಳಲ್ಲಿಯೂ ತೇರ್ಗಡೆಯಾಗಿರುವರು.

ಕಳೆದ ಇಂಟರ್‌ಮೀಡಿಯೇಟ್ ಪರೀಕ್ಷೆಯಲ್ಲಿ ಶ್ರೀ ಗಳಾದ ಪೊಡನೋಲಂಡ ಕುಶಲಪ್ಪ, ಚೋನಿರ ಕಾರ್ಯಪ್ಪ, ಕಾಯಪಂಡ ಮುತ್ತಣ್ಣ, ಎಂ. ನಾಗರಾಜುನಾಯ್ಡು, ಎ. ಡಬ್ಲ್ಯೂ. ಜಾನ್, ಮುಂಜಾಂದಿರ ಸೋಮಯ್ಯ ಇವರುಗಳು ಪೂರ್ತಿಯಾಗಿಯೂ, ಶ್ರೀ ಕುಂಞಂಡ ನಾಣಯ್ಯನವರು 1 ಮತ್ತು 2ನೇ ಭಾಗಗಳಲ್ಲೂ ಶ್ರೀ ಮೂಳೇಟಿರ ಬಿದ್ದಪ್ಪನವರು 2 ಮತ್ತು 3ನೇ ಭಾಗಗಳಲ್ಲಿಯೂ ತೇರ್ಗಡೆಯಾಗಿರುವರು.

ಕೊಡಗಿನ ಸೆಷನ್ಸ್ ಜಡ್ಜರಾದ ಶ್ರೀ ನಿಡ್ಯಮಲೆ ಮುದ್ದಪ್ಪನವರ ಪತ್ನಿಯವರು ಕಳೆದ ವಾರ ಮೃತರಾದರು.

ವಿದ್ವಾನ್ ಐ. ಎಂ. ಮುತ್ತಣ್ಣನವರು ಬಿ. ಓ. ಎಲ್. ಪರೀಕ್ಷೆಯ ಸ್ವಭಾಷಾ ಭಾಗದಲ್ಲೂ, ಶ್ರೀ ಟಿ. ಪಿ. ನಾರಾಯಣಚಾರಿಯವರು ಕನ್ನಡ ವಿದ್ವಾನ್ ಪರೀಕ್ಷೆಯಲ್ಲೂ ಶ್ರೀ ಐ. ಮಹ್ಮದ್ ಖಾನ್‌ರವರು 'ಅಡಿಬ್ ಫಜಿಲ್' ಪರೀಕ್ಷೆಯಲ್ಲೂ ಪಾಸಾಗಿರುವರು.

ತಾ. 29-5-45ನೇ ಮಂಗಳವಾರದಿಂದ ಕಿಗ್ಗಟ್ಟುನಾಡು ಹೈಸ್ಕೂಲ್ ತೆರೆಯಲ್ಪಡುತ್ತದೆ. ಸದರಿ ದಿನ ಐದನೇ ಫಾರಂ ತೆರೆಯುತ್ತಾರಾಗಿ ತಿಳಿಯುತ್ತೇವೆ. ಈ ಹೈಸ್ಕೂಲಿನ ನಲ್ಕನೇ ಫಾರಮ್ಮಿನ 24 ವಿದ್ಯಾರ್ಥಿಗಳ ಪೈಕಿ 21 ಜನರು ಪಾಸಾಗಿರುವರು.

ಕಳೆದ ವಾರ ಬಿಟ್ಟಂಗಾಲ ಗ್ರಾಮದ ಮೂಕಂಡ ಐಯ್ಯಪ್ಪನವರ ಮಗನ ಮದುವೆಯಲ್ಲಿ ನಿಷ್ಠಾ ಸೇವನೆ ಏರ್ಪಾಡು ಮನ್ನವಾಗಿದ್ದರೂ, ಕೆಲವು ನೆಂಟರು ಮದುಹೊರ್ತವದಿನ ಕಾರಿನಲ್ಲಿ ಸಾರಾಯಿ ತರಿಸಿ ಬಟವಾಡೆ ಮಾಡಲು ಯತ್ನಿಸಿದಲ್ಲು ಕೆಲವು ಗ್ರಾಮಸ್ಥರ ಪ್ರೋತ್ಸಹದಿಂದ ಹಾಗೆ ಬಟವಾಡೆ ಮಾಡದೆ ಬಾಕಿ ಮಾಡಲ್ಪಟ್ಟಿತು.


COORG FOREST DEPARTMENT

## NOTICE.

Applications are invited from candidates, who are not less than 18 years nor more than 25 years of age on 1-4-1945 for undergoing training for Rangers' appointment in the Forest College at Dehra Dun during 1946-48 Course. The applicants should be natives of Coorg and they must have passed the intermediate examination of any recognised Indian University with one or more of the following Subjects:-Mathematics, Physics, Chemistry, Botany and Zoology. A Certificate of having passed any other Examiniation of an equievalent or higer standard will be admissible Before admission to the College, the candidates are required to pass a qualifying examination and the selected candidates will have to bear half the cost of training at Dehra Dun, the Government meeting the other half of the expenses.

For further particulaas, apply to the Chief Forest Officer, Coorg. The applications should be received not later than 15-6-1945.

C. M. KUSHALAPPA,
*Cheif Forest Officir,*
*Coorg.*

## ಹೊನ್ನಂಪೇಟೆ-ಶ್ರೀಮಂಗಲ ಜಮ್ಮ ಒಟ್ಟುಗಳಲ್ಲಿ ವಿನಂತಿ.

ಸಹನೀಯರೇ,

ಈ ತಾ. 28ರಲ್ಲಿ ನಡೆಯಲಿರುವ ಕೌನ್ಸಿಲು ಚುನಾವಣೆಗೆ ನಾವು ಮೂವರು ಕಾಂಗ್ರೆಸು ಪರ ಉಮೇದುವಾರರಾಗಿ ನಿಲ್ಲಿಸಲ್ಪಟ್ಟಿದ್ದೇವೆ ಇಂದು ದೇಶದ ಸ್ವಾತಂತ್ರ್ಯಕ್ಕಾಗಿ ಹಾಗೂ ಏಳಿಗೆಗಾಗಿ ಹೋರಾಡುತ್ತಿರುವ ಸಂಸ್ಥೆಯೊದರೂ ಕಾಂಗ್ರೆಸ್ಸಿಂದೇ ಆಗಿದೆ ಆದುದರಿಂದ ನಿಮ್ಮ ಅಮೂಲ್ಯವಾದ ಮೂರು ಓಟುಗಳನ್ನು ನಾವು ಮೂವರಿಗೇ ಕೊಟ್ಟು ನಿಮ್ಮ ಸಂಸ್ಥೆಯೂ ಕಾಂಗ್ರೆಸ್ಸಿನ ಜಯವನ್ನು ಸಂಪಾದಿಸಲು ಸಹಾಯ ಮಾಡಬೇಕಾಗಿ ಪ್ರಾರ್ಥನೆ.

ಇತಿ ನಿಮ್ಮವರಾದ,

9-5-45. ಸಿ. ಎಂ. ಪೂಣಚ್ಚ,
ಕೆ ಕೆ. ಗಣಪತ್ತಿ,
3-3. ಪಿ. ನಾಣಮ್ಮಯ್ಯ.

—೦೦—


ಶ್ರೀಶಾರದಾ ಕಾಫಿ ಪೌಡರ್

ಕಾಫಿ ಬೇಳೆಯನ್ನು ಕೊಂಡುಕೊಳ್ಳುವುದಕ್ಕಿಂಥಾ ಪುಡಿಯನ್ನು ಪಡೆದುಕೊಂಡರೆ ಪೌಂಡಿಗೆ ಒಂದಾಣೆ ಲಾಭ ದೊರೆಯುವುದು.

(18 ಕಾಫಿ ಪುಡಿ ರಾತಲು 1ಕ್ಕೆ ರೂ. 1—7—0.

ಶ್ರೀಶಾರದಾ ಕಾಫಿ ವರ್ಕ್ಸ್
ಎಸ್. ಪಿ. ಪಿ. ಬಿಲ್ಡಿಂಗ್ಸ್
ಬಾಂಡಿ ಬಜಾರ್

ದಿ ನಿಖಿಲ ಕರ್ನಾಟಕ ಸೆಂಟ್ರಲ್ ಆಯುರ್ವೇದಿಕ್ ಫಾರ್ಮಸಿ, ಲಿಮಿಟೆಡ್, ಮೈಸೂರು.

ಇವರ ಸಿದ್ಧೌಷಧಗಳು.

1. ನಿಕಾಫ್ ಟೂತ್ ಪೌಡರ್. ಬೆಲೆ ಪೊಟ್ಲ ಒಂದಕ್ಕೆ 0-1-0
(ಹಲ್ಲುನೋವು, ಕೀವು ಮತ್ತು ರಕ್ತ ಸುರಿಯುವುದು, ನಾರುವುದು ಇತ್ಯಾದಿಗಳಿಗೆ)
2. ಪಾಮರಿ ಚೂರ್ಣ .... .... ಬೆಲೆ ಪೊಟ್ಣ ಒಂದಕ್ಕೆ 0-6-0
(ಕಜ್ಜಿ, ತುರಿ, ವಿಷಬು, ಇತ್ಯಾದಿ ಎಲ್ಲಾ ಚರ್ಮ ರೋಗಗಳಿಗೆ)
3. ಬಾಲವರ್ಧಿನಿ ಮಿಶ್ರಣ .... ಬೆಲೆ ಬಾಟ್ಲ ಒಂದಕ್ಕೆ 1-4-0
(ಮಕ್ಕಳ ದುರ್ಬಲತೆ, ಹೊಟ್ಟೆಯುಬ್ಬರ, ಅಜೀರ್ಣ ಮತ್ತು ವಾಂತಿ ಇತ್ಯಾದಿಗಳಿಗೆ)
4. ದ್ರಾಕ್ಷಾರಿಷ್ಟ .... .... ಬೆಲೆ ಒಂದು ಬಾಟ್ಲಿಗೆ 2-6-0
ರಕ್ತಕಾಸ, ಕ್ಷಯ, ಹೃದಯ ದೌರ್ಬಲ್ಯ, ಕಾರ್ಶ್ಯಗಳಿಗೆ)
ಉಚಿತ ಕ್ಯಾಟಲಾಗಿಗೆ ಬರೆಯಿರಿ—
ಸೋಲ್ ಏಜೆಂಟ್ಸ್ (ಮೈಸೂರು ಮತ್ತು ಕೊಡಗು)
ದಿ ಅಶ್ವಿನಿ ಮೆಡಿಕಲ್ ಹಾಲ್,
14) 215, ಸುಲ್ತಾನ್ ಪೇಟೆ, ಬೆಂಗಳೂರು ಸಿಟಿ.

ಧಾತು ವೃದ್ಧಿ ರಸಾಯನ (ZANDU)

" ರ್ಯಾಕ್ಟೋ—ಫಾಸ್ಫೋ—ಮೊಲ್ಟ್ "

ಎಂದು ಪ್ರಸಿದ್ಧ ಡಾಕ್ಟರುಗಳು ಮುಕ್ತ ಕಂಠದಿಂದ ಹೊಗಳುತ್ತಿದ್ದಾರೆ.

ಈ ರಸಾಯನ } ಕಾಯಿಲೆಯವರಿಗೆ, ಆರೋಗ್ಯದಿಂದಿರುವವರಿಗೆ, ಧಾತು ಕ್ಷೀಣತೆಯುಳ್ಳವರಿಗೆ, ರೋಗ ನಿವೃತ್ತಿಯಾಗಿ ಸುಧಾರಿಸಿಕೊಳ್ಳುವವರಿಗೆ, ಅಶಕ್ತರಿಗೆ ಟಾನಿಕ್.

ವಿದ್ಯಾರ್ಥಿಗಳಿಗೆ, ವಕೀಲರಿಗೆ, ವೈದ್ಯರಿಗೆ, ಡಾಕ್ಟರರಿಗೆ, ಶ್ರಮ ಜೀವಿಗಳಿಗೆ, ರೋಗಿಗಳಿಗೆ, ನಿರೋಗಿಗಳಿಗೆ, ಗೃಹಸ್ಥಾಶ್ರಮಿಗಳಿಗೆ, ಬ್ರಹ್ಮಚಾರಿಗಳಿಗೆ, ಸ್ತ್ರೀಯರಿಗೆ, ಪುರುಷರಿಗೆ—ಎಲ್ಲರಿಗೂ ಬೇಕಾದ ರಸಾಯನವಿದು. ಇದು ಜಠರಾಗ್ನಿಯನ್ನು ಸರಿಪಡಿಸುವುದು. ಮೆದುಳಿಗೆ ತಂಪನ್ನು ಕೊಟುಮಾಡುವುದು, ನಾಲಿಗೆಗೆ ರುಚಿಯೂಗಿರುವುದು. ಇದರಲ್ಲಿ ನವಜೀವನಕರವಾದ ಎಲ್ಲಾ ವಿಟಮಿನ್ನುಗಳು ಕೆಂಪು ರಕ್ತ ಕಣಗಳನ್ನು ಹೆಚ್ಚಿಸುವ ಅಮೂಲ್ಯ ಔಷಧಿಗಳಿವೆ.

ಇದರಲ್ಲಿ ಇಲೆಕ್ಟ್ರಿಕ್ ಫಾಸ್ಫೋಮೊಲ್ಟ್, ಹೆನೋಗ್ಲೋಬಿನ್, ಸೋದಿಗ್ಲಿಸರೊ ಫಾಸ್ಫೇಟ್ ಹೆಪ್ಸಿನ್, ಸಾಲ್, ಮೊಲ್ಟ್ ಎಕ್ಸ್‌ಟ್ರಾಕ್ಟ್, ದ್ರಾಕ್ಷಾಸವ ಮೊದಲಾದ ಪ್ರಸಿದ್ಧ ಔಷಧಿಗಳಂಶವಿದೆ. ಇಂದಿನಿಂದಲೇ ಸೇವಿಸಿ ಅನುಭವ ಪಡೆಯಿರಿ. ಇದು ಎಲ್ಲಾ ಪ್ರಸಿದ್ಧ ಔಷಧ ಷಾಪುಗಳಲ್ಲಿಹ.

ಝುಂಡು ಫಾರ್ಮಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್,
30) ಗೋಖಲೆ ರೋಡ್, ಬೋಂಬೆ.


# ಚರ್ಚಿಲ್ಲರು ಪ್ರಧಾನ ಮಂತ್ರಿತನಕ್ಕೆ ರಾಜಿನಾಮೆ ಕೊಟ್ಟರು.

ಬ್ರಿಟನಿನ ಪ್ರಧಾನ ಮಂತ್ರಿಗಳಾಗಿದ್ದ ಮಿ. ವಿನ್‌ಸ್ಟನ್ ಚರ್ಚಿಲ್ಲರವರು ತಮ್ಮ ಮಂತ್ರಿಪದವಿಗೆ ತಾ. 23. ರಲ್ಲಿ ರಾಜಿನಾಮೆ ಕೊಟ್ಟರುವರು. ರಾಜಿನಾಮೆ ಕೊಡುವ ಮೊದಲು ಅವರು ಚಕ್ರವರ್ತಿ ಜಾರ್ಜ್‌ರ ಭೇಟಿ ತೆಗೆದುಕೊಂಡಿದ್ದರು. ಇಂಗ್ಲೆಂಡಿನಲ್ಲಾಗುತ್ತಿರುವ ಚುನಾವಣೆಯ ಗೊಂದಲದ ಬಗ್ಗೆ ಬೇರೊಂದೆಡೆ ವಾರ್ತೆ ಕೊಟ್ಟರುವೆವು. ಆ ಪರಿಸ್ಥಿತಿಯಲ್ಲಿ ಪಾರ್ಲಿಮೆಂಟನ್ನು ರಾಜರು ರದ್ದು ಮಾಡಿ ಹೊಸ ಚುನಾವಣೆ ಮಾಡುವ, ಇಲ್ಲವೇ ಲೇಬರ್ ಪಕ್ಷದವರನ್ನು ಒಪ್ಪಿಸಿ ಜಪಾನು ಯುದ್ಧಾಂತ್ಯದ ವರೆಗೆ ಈಗಿದ್ದ ಸಮ್ಮಿಶ್ರ ಸರಕಾರವನ್ನೇ ಮುಂದರಿಸುವ ಮಾತುಕತೆಯಿತ್ತು. ಆದರೆ ಲೇಬರ್ ಪಕ್ಷದವರು ಚರ್ಚಿಲ್ಲರ ಸೂಚನೆಗಳನ್ನು ತಿರಸ್ಕರಿಸಿದ ಕಾರಣ ಚರ್ಚಿಲ್ಲರುಉಪ ಪ್ರಧಾನಮಂತ್ರಿಗಳಾದ ಅಟ್ಲೀಯರಿಗೆ ಪತ್ರ ಬರೆಯುತ್ತಾ ನಾವು ಈ ವರೆಗಿನಂತೆ ಸೌಹಾರ್ದತೆಯಿಂದ ಕೆಲಸ ಮಾಡುವ ಪರಿಸ್ಥಿತಿ ಉಳಿದಿಲ್ಲ. ಆದ್ದರಿಂದ ರಾಜಿನಾಮೆಯಿತ್ತಿರುವೆನೆಂದು ತಿಳಿಸಿರುವರು.

ಮುಂಬರುವ ಜುಲೈ ತಾರೀಖು 5 ರಲ್ಲಿ ಚುನಾವಣೆ ಆಗಲಿದೆ. ಆ ವರೆಗೆ ತಾತ್ಕಾಲಿಕ ಸರಕಾರವನ್ನು ರಚಿಸಲು ರಾಜರು ಮಿ ಚರ್ಚಿಲ್ಲರನ್ನೇ ಕೇಳಿಕೊಳ್ಳ ಬಹುದು.

—೦೦—

## ವೇವೆಲ್ ಯಾತ್ರೆ.

ಹಿಂದೂದೇಶದ ಸಮಸ್ಯೆಯ ಬಗ್ಗೆ ಎಮೆರಿ, ಚರ್ಚಿಲ್ಲರಲ್ಲಿ ವಿಚಾರ ವಿನಿಮಯ ಮಾಡಲೆಂದು ಇಂಗ್ಲೆಂಡಿಗೆ ಹೋದ ಹಿಂದೂದೇಶದ ವೈಸರಾಯರಾದ ಲಾರ್ಡ್ ವೇವೆಲ್ಲರ ಸೂಚನೆಗಳಿಗೆ ಎಮೆರ್ಸ್ಟ್ ಚರ್ಚಿಲ್ಲರು ಬೆಂಬಲಕೊಡಲಿಲ್ಲವೆಂದೂ ಆದ್ದರಿಂದ ವೇವೆಲ್ಲರು ನಿರಾಶರಾಗಿರುವರೆಂದೂ ವಾರ್ತೆಯಿದೆ. ಆದರೂ ಕೆಲವುಕ್ಕೆ ತಿದ್ದುಪಡಿಗಳಿಂದೊಡಗೂಡಿದ ಸುಧಾರಣಾ ಯೋಜನೆಯನ್ನು ಅವರು ಭಾರತಕ್ಕೆ ಬರುವಾಗ ತರಲಿರುವರಂತೆ. ಇದಕ್ಕೆ ಬ್ರಿಟಿಷ್ ಮಂತ್ರಿಮಂಡಳದ ಒಪ್ಪಿಗೆಯೂ ದೊರೆತಿದೆಯೆಂದು ವರ್ತಮಾನವಿದೆ. ವೇವೆಲ್ಲರ ಈ ಯೋಜನೆ ಪ್ರಕಾರ ಹಿಂದೂ ದೇಶದ ರಾಜಕೀಯ ಮುಂದಾಳುಗಳೆಲ್ಲರನ್ನೂ ಬಿಡುಗಡೆಯೂಗಬಹುದೆಂದು ವರ್ತಮಾನವಿದೆ. ಉಳಿದ ವಿಚಾರಗಳಲ್ಲಿ ಅಲ್ಲಲ್ಲಿ ಸ್ವಲ್ಪ ಬದಲಾವಣೆಯಿದ್ದರೂ ಪ್ರಮುಖ್ಯವಾಗಿ ಇದು ಕ್ರಿಪ್ಸ್ ಸಂಧಾನದ ಸೂಚನೆಗಳೇ ಎನ್ನಬಹುದೆನ್ನುತ್ತಾರೆ. ವೇವೆಲ್ಲರ ಈ ಯೋಜನೆ ಪ್ರಕಾರ ಕೇಂದ್ರ ನ್ಯಾಯಶಾಶನ ಸಭೆಯವರು ವೈಸರಾಯರ ಎಗ್ಸಿಕ್ಯೂಟಿವ್ ಕೌನ್ಸಿಲನ್ನು, ಸಂರಕ್ಷಣಾ, ಆರ್ಥಿಕ ಯೂ ವಿದೇಶ ವ್ಯವಹಾರ ಈ ವಿಚಾರಗಳಲ್ಲಿ ಬಿಟ್ಟು ಬದಲು ಮಾಡುವದು ಸಾಧ್ಯವಿದೆಯಂತೆ. - ಕ್ರಿಪ್ಸ್ ಕೊಡುಗೆಯಲ್ಲಿ ಈ ಶರತಿಲ್ಲ.

ವೇವೆಲ್ಲರ ಯೋಜನೆಯನ್ನು ಭಾರತೀಯರು ಅಂಗೀಕರಿಸದೆ ತಿರಸ್ಕರಿಸಿದರೆ, ಆ ಪರಿಣಾಮವಾಗಿ ದೇಶದಲ್ಲಿ ದಂಗೆಯೂದರೆ, ಅದನ್ನು ಅಡಗಿಸಲು ಹಿಂದೂದೇಶದ ಸೇನೆಯನ್ನು ಉಪಯೋಗಿಸಲು ವೇವೆಲರಿಗೆ ಬ್ರಿಟಿಷ್ ಮಂತ್ರಿಮಂಡಲವು ಪೂರ್ಣ ಅಧಿಕಾರಕೊಟ್ಟಿದೆ.

ಈ ಮಧ್ಯೆ ತನ್ನ ಸೂಚನೆಗಳು ನಿರಾಕರಿಸಲ್ಪಟ್ಟದ್ದಕ್ಕೆ ಬೇಸರಗೊಂಡ ವೈಸರಾಯರು ತಮ್ಮ ವೈಸರಾಯಗಿರಿಗೆ ರಾಜಿನಾಮೆಕೊಡುವ ವರ್ತಮಾನವಿತ್ತು. ಆದರೆ ಪ್ರಧಾನ ಮಂತ್ರಿಗಳಾದ ಚರ್ಚಿಲ್ಲರ ಬೋಧನೆಕೊಟ್ಟು ಇಂಗ್ಲೆಂಡಿನ ಮುಂದಿನ ಚುನಾವಣೆಯ ವರೆಗೆ ಇರಬೇಕೆಂದು ಒತ್ತಾಯಿಪಡಿಸಿರುವರು.

—೦೦—

## ಇಂಗ್ಲೆಂಡಿನ ಚುನಾವಣೆ.

10 ವರ್ಷಗಳ ಹಿಂದೆ ಆರಿಸಲ್ಪಟ್ಟ ಬ್ರಿಟಿಷ್ ಪಾರ್ಲಿಮೆಂಟು ಇಂದೂ ಕೆಲಸ ಮಾಡುತ್ತಿದೆ. ಯೂರೋಪಿನ ಯುದ್ಧ ಮುಕ್ತಾಯವಾದ ಕಾರಣ ಚುನಾವಣೆಯ ಗೊಂದಲವು ಇಂಗ್ಲೆಂಡಿನಲ್ಲಿ ವಿರುಸಾಗಿ ನಡೆದಿದೆ. ಬ್ರಿಟಿಷ್ ಪ್ರಧಾನ ಮಂತ್ರಿಗಳಾದ ಚರ್ಚಿಲ್ಲರು ಎಲ್ಲಾ ಲೇಬರ್ ಪಕ್ಷದವರಿಗೆ ಪತ್ರ ಬರೆದು ಜಪಾನ್ ಯುದ್ಧ ಮುಗಿಯುವ ವರೆಗೆ ಚುನಾವಣೆ ಮಾಡುವದು ಹಿತವಲ್ಲವೆಂದೂ ಈಗಿರುವ ಸಮ್ಮಿಶ್ರ ಸರಕಾರವೇ ಮುಂದುವರಿಯಲೆಂದೂ ಸೂಚಿಸಿದ್ದಾರೆ. ಆದರೆ ಲೇಬರ್ ಪಕ್ಷದವರು ಇದನ್ನು ವಿರೋಧಿಸಿದ್ದಾರೆ. ಐನೂನಿನಂತೆ ಜುಲೈಯಲ್ಲ ಚುನಾವಣೆ ಆಗಲೇ ಬೇಕೆಂದಿದ್ದಾರೆ. ಈ ಹತ್ತು ವರ್ಷಗಳ ಅವಧಿಯೇ ಹೆಚ್ಚಾಯಿತು ಎಂದು ಅವರ ವಾದ. ಈ ವಿಚಾರ ನಿಶ್ಚಿತ ಅಭಿಪ್ರಾಯ ಇನ್ನೂ ಮೂರ್ಪಡಲಿಲ್ಲ. ಈ ಸಾರೆ ಲೇಬರ್ ಪಕ್ಷದವರು ಒಟ್ಟು 619 ಸ್ಥಳಗಳಲ್ಲಿ 600 ಕ್ಕೆ ತಮ್ಮ ಉಮೇದುವಾರರನ್ನು ನಿಲ್ಲಿಸುವ ತೀರ್ಮಾನಮಾಡಿದ್ದಾರೆ. ಚುನಾವಣೆಯ ಜನತೆಯ ಬಗ್ಗೆ ಅಭಿಪ್ರಾಯ ತೆಗೆದು ಅದರಲ್ಲತೆ ಚುನಾವಣೆಯ ಆವಶ್ಯಕತೆಯನ್ನು ತೀರ್ಮಾನಿಸುವ ಸೂಚನೆಯನ್ನು ಚರ್ಚಿಲ್ಲರು ಪುನಹ ಮಾಡಿರುವರು.

—೦೦—

ಕಾಂಗ್ರೆಸ್ಸೇ ಒಡ ಜನರ ಜೀವಾಳ, ಕಾಂಗ್ರೆಸ್ಸೇ ಆನಾಥರ ಆಶ್ರಯದಾಯಿನಿ, ಕಾಂಗ್ರೆಸ್ಸೇ ರೈತರ ಕಾಮಧೇನು ಎಂದು ಕೊಡಗಿನ ಇತರ ಭಾಗಗಳು ಏಕಕಂಠದಿಂದ ಸಾರಿವೆ. ವೀರಾಜಪೇಟೆ, ಪೊನ್ನ ಪೇಟೆಗಳು ಈ ಧ್ವನಿಗೆ ತಮ್ಮ ಕಂಠವನ್ನು ಸೇರಿಸವೇ?

—೦೦—

**The Canara Banking Corporation Limited.**

(Incorporated in British India with Limited Liablity)

26) ESTD—1906.

**Head Office: U D I P I, South Kanara.**

**ANNOUNCEMENT.**

**A Branch of the Bank has been opened at CAMP BAZAAR, CANNANORE on 18-5-1945.**

**ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.**

**— ಬೇಕಾಗಿದ್ದಾರೆ —**

**ಜನಬಳಿಕೆಯಿರುವ ಕಾರ್ಯಚತುರ ಏಜೆಂಟರು ಲಾಭದಾಯಕ ಶರತುಗಳ ಮೇಲೆ ಕೊಡಗಿನ ಉದ್ದಗಲಕ್ಕೂ ಬೇಕಾಗಿದ್ದಾರೆ. ಯೋಗ್ಯತೆ, ವಯಸುಗಳನ್ನು ಸೂಚಿಸಿ ಬರೆಯಿರಿ.**

**ಕೊಚ್ಚಿಕಾರ್ ಬ್ರದರ್ಸ್, ಲಿ.**

ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು.

30) ಪಿ. ಬಿ. ನಂ. 337, ಎಗ್ಮೂರ್.

**ಎಂಪ್ಸ್ ಆಫ್ ಇಂಡಿಯಾ**

**ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.**

14) ಸ್ಥಾಪನೆ:—೧೮೯೩.

| | | |
|---|---|---|
| ೪೭ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು. | ಒಟ್ಟು ಆದಾಯ | ₹೭,೫೭,೦೦೦ ಮೀರಿದೆ |
| | ಚಾಲ್ತಿಯಿಟ್ಟಿನ ಪೀಮಿ | ೧೬,೪೬,೮೮,೦೦೦ ,, |
| | ಅನ್ಯ .... .... | ೬,೫೦,೪೬,೦೦೦ ,, |
| ಕಂಪನಿಯ ಅಮರಾಲ್ಲ ಕೂಟ್ಟ ಫ್ಲೈನ್ಸಗಳು | | ೮,೫೮,೦೦,೦೦೦ ,, |

| ಆಂಗ ಕಛೇರಿ: | ಏಜೆನ್ಸಿ | ಪ್ರಧಾನ ಕಛೇರಿ: |
|---|---|---|
| ಡಿಸ್ಪೆನ್ಸರಿ ಬಿಲ್ಡಿಂಗ್, | ಕೆಜರ್ ಬೆಲ್ಟ್ | ಎಂಪ್ರೆಸ್ ಆಫ್ ಇಂಡಿಯಾ |
| ಕೆಂಪೇಗೌಡರ್ಸ್, ಬೆಂಗಳೂರು. | ಸ್ವಾಗತಿಸಿದೆ. | ಲೈಫ್ ಬಿಲ್ಡಿಂಗ್ ಬೋಂಬೆ |

**"ಟ್ರಾಪಿಕಲ್"**

ಜಸ್ಟಿಸ್ ಮೋತಿಲಾಲ್ ನೆಹರು, ಸರ್ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್, ಡಾ. ಯು. ರಾಮರಾವ್, ಸರ್ ಚಾರ್ಲ್ಸ್ ಮೆಟ್ಕಾಫ್ ಮೋಸ್ ಮೊದಲಾದ ರಾಷ್ಟ್ರೀಯ ಧುರೀಣರಿಂದ ಸ್ಥಾಪಿಸಿ, ಬೆಳೆಸಲ್ಪಟ್ಟ ಲಿಮಿಟೆಡ್ ಕಂಪೆನಿ.

ಜೀವನ ಸಂಧ್ಯಾ ಕಾಲದಲ್ಲಿ ಜೀವನಪರ್ಯಂತ ನಿಮ್ಮನ್ನು ರಕ್ಷಿಸುವುದು. ಅದರಿಂದ ಹುಟ್ಟಿದ ಬೇಶದ ರಾಷ್ಟ್ರೀಯ ಸಂಸ್ಥೆಗಳಲ್ಲಿ ಒಂದಾದ ಟ್ರಾಪಿಕಲ್‌ನಲ್ಲಿ ಏನು ಮಾಡಿರಿ.

ಮುಖ್ಯ ಏಜೆಂಟರು: ಮೊದಲಿಯಾರ್ & ಕಂ. [ಮೆಸರ್ಸ್ ಮೊದಲಿಯಾರ್ ಅಂಡ್ ಕಂಪೆನಿ]

ಲೋಕಲ್ ಮ್ಯಾನೇಜರ್, ಇನ್ಸ್‌ಪೆಕ್ಟರ್ಸ್. ಎಂ. ರಂಗನಾಥಶೆಟ್ಟಿ,

12) ಮೆನೇಜರ್. OR ಬ್ರಾಂಚ್ ಮ್ಯಾನೇಜರ್, ಎಂ. ಆರ್.

**ಕೂಡಗು ಸಂಪ್ರಲ್ ಸಿಟಿಸಹಕಾರಿ ಬ್ಯಾಂಕ್, ಲಿಮಿಟೆಡ್, ಮಂಡಿಕೇರಿ.**

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರ್ ಮಾಡಲ್ಪಟ್ಟಿದೆ. (1921ರಲ್ಲಿ ಸ್ಥಾಪಿತವಾಗಿದೆ.

ವಸೂಲಾದ ಶೇರ್ ಮೊಬಲಗು ರೂ. 95,900, ಜೊತೆ ಬಂದ ಕ್ಷೇವಣಾತಿ 2,24.750 ವಸೂಲಾದ ಕ್ಷೇಮನಿಧಿ 2,16,೫೦೨, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 2,02,925.

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಪೆಜ್ಜಾಗಿ ಸಾಲ ಕೊಡುವುದಲ್ಲದೆ ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 90% ಕೊಡಲಾಗುವುದು. ಎರಡು ಕ್ಷೇವಣಾತಿಗಳಿಗೆ ಒಂದು ವರ್ಷದಿಂದ ಮೂರು ವರ್ಷಗಳ ವರೆಗೆ ಶೇಕಡ 2. ಮೂರು ವರ್ಷಗಳಿಂದ ಐದು ವರ್ಷಗಳ ವರೆಗೆ 2½. ಐದು ವರ್ಷಗಳಿಂದ ಹತ್ತು ವರ್ಷಗಳ ವರೆಗೆ 3½. ಹತ್ತು ಅದಕ್ಕಿಂತ ಮೇಲ್ಪಟ್ಟವುಗಳಿಗೆ 4½. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಶೇಕಡ 3—8—0. ವರ್ಷಕ್ಕೊಮ್ಮೆ ರಿಜಿಸ್ಟ್ರಾರರು ಲೆಕ್ಕ ಪರಿಶೋಧನೆ ಮಾಡುತ್ತಾರೆ.


## 'ನಿಜವಾದ ಯುದ್ಧ ಪ್ರಾರಂಭವಾಗಲಿದೆ'

ಮಿತ್ರ ಒಕ್ಕೂಟದೊಡನೆ ಒಪ್ಪಂದ ಮಾಡಿಕೊಳ್ಳಲು ತಮ್ಮ ಶರತುಗಳನ್ನು ಜಪಾನು ಮುಂದರಿಸಿತ್ತೆಂದೂ ಅದನ್ನು ಬ್ರಿಟನ್ ಅಸೇರಿಕಾಗಳು ತಿರಸ್ಕರಿಸಿದವೆಂದೂ ಒಂದು ವಾರ್ತೆ ಪ್ರಕಟವಾಗಿತ್ತು. ಈ ವಾರ್ತೆಯ ಬಗ್ಗೆ ಜಪಾನು ಹೀಗೆ ಹೇಳಿದೆ. "ಈ ವಾರ್ತೆಯು ಕೇವಲ ಮಿತ್ರರ ಕಲ್ಪನೆಯದು. ಇದು ಕೇವಲ ಪ್ರಚಾರವಲ್ಲದೆ ಇದರಲ್ಲಿ ಸತ್ಯಾಂಶವೇನೂ ಇಲ್ಲ. ಯುದ್ಧವು ಈಗ ಪ್ರಾರಂಭವಾಗಲಿದೆಯೆಂಬುದು ಎಲ್ಲ ಜಪಾನರ ಅಭಿಪ್ರಾಯವಾಗಿದೆ. ಟೋಕಿಯೋ ಮತ್ತು ನಗೋಯಾಗಳ ಮೇಲೆ ವಿಮಾನದ ಬಾಂಬು ಹಾಕಿದರೆ ಬಹುದು. ಈ ಬಾಂಬುಗಳೆಂಬ ಜರ್ಮಾರಿತವಾದ ಈ ನಗರಗಳ ನಿರಾಶ್ರಿತ ಜನರನ್ನು ಜಪಾನಿನ ಅವಿಭಕ್ತ ಕುಟುಂಬಗಳು ಸೇರಿಸಿಕೊಂಡಿವೆ. ಮುಂದೆ ಚೀನವೇ ನಮ್ಮ ರಣರಂಗವಾಗಬಹುದು. ಯಾಕೆಂದರೆ ಅಮೇರಿಕನರು ತಮ್ಮ ಸೈನ್ಯ ಸಾಹಿತ್ಯವನ್ನು ಚೀನಾದಲ್ಲಿ ತುಂಬಿಸುತ್ತಿದ್ದಾರೆ. ಆದ್ದರಿಂದ ಅಲ್ಲೇ ರಣಕ್ಷೇತ್ರವಾಗಬಹುದು." ಜಪಾನಿನ ವಿರುದ್ಧ ಯುದ್ಧ ಇನ್ನು ಪ್ರಾರಂಭವಾಗಲಿದೆಯೆಂಬ ಈ ಮಾತು ಸರಿಯಲ್ಲ. ಜಪಾನರು ಇತ್ತೀಚಿನ ಸರ್ವನಾಶನವನ್ನು ತಮ್ಮ ದೂರದ ಆಕ್ರಮಿತ ಭಾಗಗಳನ್ನು ಬಿಟ್ಟುಕೊಡುತ್ತಿದ್ದಾರಂತೆ. ಬರ್ಮಾದ ಬಹುಭಾಗವನ್ನು ಬಿಟ್ಟು ಹಿಂದೆ ಸರಿದಿದ್ದಾರೆ. ಮಲಯಾ ಮತ್ತು ಜಿದ ದೇಶಗಳಿಂದ ಹಿಂಪಡೆಯಲಾಗಿದೆ. ಇವೆಲ್ಲವನ್ನು ಜಪಾನು ಯುದ್ಧಕ್ಕೆ ಬೇಕಾಗಿರುವ ಪದಾರ್ಥಗಳನ್ನು ಸಂಪಾದಿಸಿಕೊಂಡಿರುವ ಪ್ರದೇಶಗಳನ್ನು ಅವರು ಬಿಟ್ಟುಕೊಡುತ್ತಿದ್ದಾರಂತೆ.

### ಬ್ರಿಟಿಷ್ ಧ್ವಜವನ್ನು ಕದ್ದ.

ಆಗಸ್ಟ್ 14-ರಲ್ಲಿ ವಿಜಯೋತ್ಸವ ಜರಗಿಸಲು ಉದ್ದೇಶಿಸಿದ್ದಾಗ ರಸ್ತೆಗಳಲ್ಲಿ ಬ್ರಿಟಿಷ್ ಧ್ವಜಗಳನ್ನು ಕಟ್ಟಲಾಗಿತ್ತು. ಆ ಧ್ವಜಗಳಲ್ಲಿ ಒಂದನ್ನು ಕದ್ದ ಬೆಂಗಳೂರಿನ ಎಳೆಯ ಹುಡುಗನೊಬ್ಬನನ್ನು ಅಧಿಕಾರಿಗಳು ಹಿಡಿಯಲ್ಪಟ್ಟಿದ್ದು ವಿಚಾರಿಸಲ್ಪಟ್ಟಾಗ ಈ ರೀತಿ ಹೇಳಿದನು. 'ನನಗೆ ಇಷ್ಟವಿಲ್ಲದೆ ಮಡಿ ಮತ್ತು ಎರಡನೆಯ ಕ್ಲಾಸಿಗೆ ಸೇರಿಸಿದ್ದಾರೆ. ಜನರಿಗೆ ಸರಿಯಾಗಿ ಅನ್ನ ಒದಗಿಸಿಕೊಡದೆ ಇದು ನನಗೆ ಸಾಧ್ಯವಿಲ್ಲದಾಗಿ ಕೆಲವು ದಿನಗಳಿಂದ ನಾನು ಉಪವಾಸವಿರುವೆನು. ಈ ದಿನ ಬಡ ಜನರಿಗೆ ಯಂದ್ರದಲ್ಲಿ ಗೆದ್ದ ಉತ್ಸವದ ಸಂದರ್ಭದಲ್ಲಿ ಕೊಳ್ಳುವುದೆಂದು ತಿಳಿದು ನಾನು ಅಂಗಡಿಗೆ ಊಟ ನೂಡಿದೆನು. ನನಗೆ ಅಕ್ಕಿ ಗಲ್ಲಿ ಸ್ವಲ್ಪವನ್ನು ಉಳಿಸಿ ನಮ್ಮ ಮನೆಗೆ ಮತ್ತು ಹೆಂಡತಿಗಾಗಿ ತೆಗೆದುಕೊಂಡಿರುವನು. ನನಗೆ ಊಡಲು ಸರಿಯಾಗಿ ಒಟ್ಟೆ ಇಲ್ಲ ಒಟ್ಟೆ ಇಲ್ಲದ ಕಾರಣದಿಂದಲೇ ನನ್ನ ಹೆಂಡತಿ ಇಲ್ಲಿಗೆ ಬರಲಿಲ್ಲ. ನಾನು ಬರುತ್ತಿದ್ದಾಗ ದಾರಿಯಲ್ಲಿ ಹಾರಾಡುತ್ತಿರುವ ಈ ಒಟ್ಟೆಗುಂಪುಗಳನ್ನು ಕಂಡು ಅವುಗಳಲ್ಲಿ ಎರಡನ್ನಾದರೂ ನನ್ನ ಹೆಂಡತಿಗೆ ಊಡಲು ತೆಗೆದುಕೊಂಡು ಹೋಗಿ ಕೊಡಲು ನಿಶ್ಚಯಿಸಿದೆ. ಆದರೆ ಸಿಕ್ಕಿಬಿದ್ದೆ' ಎಂದನಂತೆ. ಅಧಿಕಾರಿಯು ಆತನನ್ನು ಮನೆಗೆ ಕರೆದುಕೊಂಡು ಹೋಗಿ ಸ್ವಲ್ಪ ಬಟ್ಟೆ ಕೊಟ್ಟು ಕಳುಹಿಸಿದನಂತೆ.

### ಕಲ್ಲು ಹೃದಯ.

ಕಳೆದ ವಾರ ಕಡಮಕಲ್ ತೋಟದಿಂದ ಬರುತ್ತಿದ್ದ ಒಬ್ಬ ಕಲಸಗಾರನು ಹೊಟ್ಟೆಗೆ ಏರಿಯಾಗಿ ಅನ್ನವಿಲ್ಲದೆ ಮನೆಯಿಂದ ಹೊರಟಿದ್ದನಂತೆ. ಆತನ ಹೆಂಡತಿ ಸ್ವಲ್ಪ ಕಷ್ಟಪಟ್ಟು ಮೂರು ಪಲ್ಲ ಮೂರು ರಾಗಿಗಳನ್ನು ಪರೆಗೆ ಅನ್ನ, ನೀರು ಇಲ್ಲದೆ ಬಿಟ್ಟಿದ್ದನು. ಈತನನ್ನು ಕಂಡಾಗಲೇ ವಿಷಾದ ಅವನಿಗೆ ಬಂದಿತ್ತಂತೆ. ಸ್ವಲ್ಪ ಹೊತ್ತಿನ ನಂತರ ಅವನು ಮನೆಗೆ ಬಂದಾಗ ಅವನ ಹೆಂಡತಿ ಮಲಗಿದ್ದಳಂತೆ. ಅವಳನ್ನು ಎಬ್ಬಿಸಿ ಅನ್ನ ಕೊಡಲು ಪ್ರಯತ್ನಿಸಿದನಂತೆ. ಆಕೆ ಏಳಲಿಲ್ಲವಂತೆ. ಆಗ ಅವನು ಆಕೆಯನ್ನು ಅಲ್ಲಾಡಿಸಿದನಂತೆ. ಆಕೆ ಸತ್ತಿದ್ದಳಂತೆ. ಹೆಂಡತಿ ಸತ್ತಿರುವಳೆಂದು ಅರಿತ ಆತನು ಅಲ್ಲಿಂದ ಹೊರಟು ಪೊಲೀಸ್ ಸ್ಟೇಷನ್ನಿಗೆ ಬಂದು ಕಂಪ್ಲೇಂಟು ಕೊಟ್ಟನಂತೆ. ಸಂಜೆ ಒಂದು ಗಾಡಿ ಏರ್ಪಾಡಾಗಿ ಹೆಣ ಮಡಿಕೇರಿಗೆ ಸಾಗಿಸಲ್ಪಟ್ಟಿತಂತೆ. ಈ ಅನಾಥ ಬಡಪಾಯಿಗಳು ಜಿಪುಣ ಪೊಲೀಸನ ಬಿಡಿಗಾಸಿನ ಲೆಕ್ಕ ಕಾಯಿಸಿದರು. ಸಂಜೆ ಒಂದು ಗಾಡಿ ಏರ್ಪಾಡಾಗಿದ್ದರೆ ಸಿಲಿಂಡ್ರಿಕಲ್ ಸಮಾಧಿಯಿಂದ ಪಾರಾಗಬಹುದಿತ್ತೇನೋ. ಈ ಕಲ್ಲು ಹೃದಯದ ಪೊಲೀಸನಿಗೆ